ಫಾರೆಸ್ಟ್ ಇಲಾಖಾ.

ಇನ್ಸ್ತಿಹಾರ್.

ತಾರೀಖು 22ನೆ ಡಿಸೆಂಬರ್ 1903, ಬೆಂಗಳೂರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—1901ನೆ ಇಸವಿ ಅಕ್ಟೋಬರ್ 2ನೆ ಮಾರ್ಕ್ಹಂ 245–1300ನೆ ನಂಬರ್ ಗವರ್ನ್‌ಮೆಂಟ್ ನೋಟಿಫಿಕೇಷ್ಯ XIIನೆ ರೂಲ್ ಮೇರಿಗೆ ಮತ್ತು 1902ನೆ ಇಸವಿ ಮೇ 5ನೆ ಮಾರ್ಕ್ಹಂ ನೋಟಿಫಿಕೇಷ್ಯ ಅನುಸರಿಸಿ, ಈ ಕೆಳಗೆ ನಮೂದಿಸಿರುವ ಜನರನ್ನು ಬೆಂಗಳೂರು ಡಿಸ್ಟ್ರಿಕ್ಟ್ ಈ ಕೆಳಗೆ ಕಂಡ ಸ್ಟೇಟ್ ಫಾರೆಸ್ಟ್ ಡಿಸ್ಟ್ರಿಕ್ಟ್ ಫಾರೆಸ್ಟ್ ಗಳು ಮತ್ತು ಫ್ಲ್ಯೂಯಲ್ ರಿಸರ್ವ್‌ಗಳಲ್ಲಿ ಬೀಣಸಾಜಿ, ಬಿದಿರು ವಗೈರೆಗಳನ್ನು ಕಡಿದು ಸಾಗಿಸಿಕೊಳ್ಳಲು, ತಖ್ತೆಯಲ್ಲಿ ಕಂಡಂತೆ, ಆಯಾ ಯ ಜನರನ್ನು ಆಯಾಯ ಸ್ಥಳಗಳಲ್ಲಿ ಹಾಸಲು ತಗದುಕ್ಕೊಂಡು ಲೈಸೆನ್ಸ್‌ಗಳನ್ನು ಕೊಡುವದಕ್ಕೂ ಹಾಸಲ್ ಸಂದ ಲೈಸೆನ್ಸ್‌ಗ ಳನ್ನು ಅಜಮಾಯಿಷಿ ಮಾಡುವದಕ್ಕೂ, ಲೈಸೆನ್ಸ್ ವೆಂಡರ್ ಅಥವಾ ಕಮಿಷ್ಯ ವಿಜಂಟ್‌ರನ್ನಾಗಿ ನೇಮಕ ಮಾಡಿರುತ್ತೆ :—

ನಂಬ್ರ.	ರೇಂಜಿನ ಹೆಸರು.	ತಾಲ್ಲೂಕಿನ ಹೆಸರು.	ಲೈಸೆನ್ಸ್ ವೆಂಡರಿರುವ ಸ್ಥಳ ಅಥವಾ ಹೆಡ್‌ಕ್ವಾರ್ಟರ್.	ಲೈಸೆನ್ಸ್ ವೆಂಡರುಗಳ ಹೆಸರು.	ಅಧಿಕಾರ.	ಆಧಿಕಾರ ಚಲಾಯಿಸತಕ್ಕ ಫಾರೆಸ್ಟ್‌ಗಳ ಹೆಸರು.	ಟಿಪ್ಪಣಿ.
1	ಬೆಂಗಳೂರು	ದೊಡ್ಡಬಳ್ಳಾಪುರ	ಬಿಲೇನಹಳ್ಳಿ	ನರಸಪ್ಪ, (ಶ್ಯಾನುಭೋಗ)	ಬಿದಿರು, ಇಜ್ಜಲು, ಸಾದೆಗಳಿಗೂ ಮತ್ತು ದನಗಳನ್ನು ಮೇಯಿಸುವದಕ್ಕೂ ಲೈಸೆನ್ಸುಗಳನ್ನು ಕೊಡುವದು	ದೊಡ್ಡ ಬಳ್ಳಾಪುರದ ಫಾರೆಸ್ಟ್ ಅಂದರೆ ಉಜಿನಿ, ಹುಲ್ಲಡ್ಡಿ, ವಜಾಕಳಿದುರ್ಗ, ಹಾರೋಹಳ್ಳಿ, ದೇವರಬಟ್ಟ, ಮೆಲ್ಲಾಯಿಕನ ಹಳ್ಳಿ	
2	ಡಿಟೋ ..	ಕಾನಕಾನ ಹಳ್ಳಿ	ಕಗ್ಗಲೀಪುರ ...	ಕೃಷ್ಣಪ್ಪ, (ಶ್ಯಾನುಭೋಗ)	ಡಿಟೋ	ರಾಗೀಹಳ್ಳಿ ಸ್ಟೇಟ್ ಫಾರೆಸ್ಟ್, ಬಳ್ಳನಕುಪ್ಪೆ ಮತ್ತು ತಮ್ಮನಾಯ್ಕನಹಳ್ಳಿ ಫ್ಲ್ಯೂಯಲ್ ರಿಸರ್ವ್‌ಗಳು	
3	ಡಿಟೋ ..	ಅನೇಕಲ್ ..	ತಮ್ಮನಾಯ್ಕನ ಹಳ್ಳಿ	ಶೇಷಗಿರಿಯಪ್ಪ, (ಶ್ಯಾನುಭೋಗ)	ಡಿಟೋ	ತಮ್ಮನಾಯ್ಕನ ಹಳ್ಳಿ ಮತ್ತು ಬಳ್ಳನಕುಪ್ಪೆ ಫ್ಲ್ಯೂಯಲ್ ರಿಸರ್ವ್‌ಗಳು	
4	ಡಿಟೋ ..	ಡಿಟೋ ..	ಬನ್ನೇರುಘಟ್ಟ (ಸಂಪಿಗೇಹಳ್ಳಿ)	ಕಂಪೇಗೌಡ, (ಪಟೇಲ್)	ಡಿಟೋ	ರಾಗಿಹಳ್ಳಿ ಸ್ಟೇಟ್ ಫಾರೆಸ್ಟ್	
5	ಕ್ಲೋಸ್‌ಪೇಟೆ	ಕ್ಲೋಸ್‌ಪೇಟೆ	ಕ್ಲೋಸ್‌ಪೇಟೆ .	ಜೀವಣ್ಣರಾವ್, (ಸಬಾ ಶ್ಯಾನುಭೋಗ)	ಡಿಟೋ	ಹಂದಿಗೊಂದಿ, ತೆಂಗಿನಕಲ್ ಮತ್ತು ಮಾಕಳಿ ಸ್ಟೇಟ್ ಫಾರೆಸ್ಟ್‌ಗಳು, ಮತ್ತು ತಾಲ್ಲೂಕಿನ ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳು	
6	ಡಿಟೋ ..	ಡಿಟೋ ..	ಬಿಡದಿ ...	ರಾಮಕೃಷ್ಣಪ್ಪ, (ಜಮೀನ್ದಾರ್)	ಡಿಟೋ	ಹಂದಿಗೊಂದಿ ಸ್ಟೇಟ್ ಫಾರೆಸ್ಟ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳು	
7	ಡಿಟೋ :	ಚನ್ನಪಟ್ಟಣ..	ಚನ್ನಪಟ್ಟಣ ...	ಹನುಮಂತರಾವ್, (ಡಿಪ್ಯೂ ಹೆಡ್‌ಗಾರ್ಡ್)	ಡಿಟೋ	ಮಾಕಳಿ, ತೆಂಗಿನಕಲ್, ಚಿಕ್ಕ ಮತ್ತು ದೊಡ್ಡ ಮಣ್ಣಗುಡ್ಡೆ ಫಾರೆಸ್ಟ್‌ಗಳು	
8	ಡಿಟೋ ..	ಮಾಗಡಿ ...	ವೀರೇಗೌಡನ ದೊಡ್ಡಿ	ಚಿಕ್ಕವೀರೇಗೌಡ, (ಪಟೇಲ್)	ಡಿಟೋ	ಸಾವನದುರ್ಗ ಮತ್ತು ಸಿದ್ದೇದೇವರ ಬೆಟ್ಟ ಸ್ಟೇಟ್ ಫಾರೆಸ್ಟ್‌ಗಳು, ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳು	
9	ಕಾನಕಾನಹಳ್ಳಿ	ಕಾನಕಾನ ಹಳ್ಳಿ	ಕಾನಕಾನಹಳ್ಳಿ.	ನರಸಪ್ಪ, (ಶ್ಯಾನುಭೋಗ)	ಡಿಟೋ	ಬಿಳಿಕಲ್ ಮತ್ತು ಬಾಣಂತಿ ಮಾರಿ ಸ್ಟೇಟ್ ಫಾರೆಸ್ಟ್‌ಗಳು, ಬಟ್ಟಹಳ್ಳಿ ವಾಡೆ ರಿಸರ್ವ್‌ಗಳು	
10	ಡಿಟೋ ..	ಡಿಟೋ ...	ಹನಿಯೂರು .	ಪುಟ್ಟರಾಮೈಯ್ಯ, (ಶ್ಯಾನುಭೋಗ)	ಡಿಟೋ	ಕಬ್ಬಾಳು ಫಾರೆಸ್ಟ್ ಮತ್ತು ತೈಲೂರು ರಿಸರ್ವ್‌ಗಳು	
11	ಡಿಟೋ ..	ಡಿಟೋ ..	ಹಾರೋಹಳ್ಳಿ ...	ತ್ಯೀನಿವಾಸಯ್ಯ, (ಪಟೇಲ್)	ಡಿಟೋ	ಗಂಗಾಧರನ ಗುಡ್ಡೆ ರಿಸರ್ವ್, ಹಾರೋಹಳ್ಳಿ ಮತ್ತು ದೇವಸಂದ್ರ ಡಿಸ್ಟ್ರಿಕ್ಟ್ ಜಂಗಲ್‌ಗಳು ಸಹಾ	
12	ಡಿಟೋ ..	ಡಿಟೋ ..	ಮುಳ್ಳಹಳ್ಳಿ ...	ವೆಂಕಟರಾಮೈಯ್ಯ, (ಬನ್ನೇ ಮುಕ್ಕೊಳ್ಳು)	ಡಿಟೋ	ಚಿಲಂವ್ವಾಡಿ ಮತ್ತು ಮುಗ್ಗೂರು ಸ್ಟೇಟ್ ಫಾರೆಸ್ಟ್‌ಗಳು.	
13	ಡಿಟೋ ..	ಮಳವಳ್ಳಿ .	ಹಲಗೂರು ..	ರಾಮಸ್ವಾಮೈಯ್ಯ, (ಹಲಗೂರು ಪಟೇಲ್ ಕೃಷ್ಣಪ್ಪನವರಮಗ),	ಡಿಟೋ	ಬನಪನಪಟ್ಟ ಸ್ಟೇಟ್ ಫಾರೆಸ್ಟ್	

ಟಿ. ಅಬ್ದುಲ್ ಕರೀಂ,
ಫಾರೆ ಡೆಪ್ಯೂಟಿ ಕಮಿಷನರ್, ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 15ನೆ ಡಿಸೆಂಬರ್ 1903.

ಈ ಕೆಳಗೆ ನಮೂದಿಸಿರುವ ಇಸ್ತಿಹಾರನ್ನು ಸರ್ವರ ತಿಳುವಳಿಕೆ ಬಗ್ಗೆ ಘಾಯಿಷ್ ಮಾಡಿ ಇಧೆ:—ಚಿತ್ರದುರ್ಗದ ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸಿರುವ ಮನ್ನಾ ಮತ್ತು ರಿಜರ್ವ್ ಜಂಗಲುಗಳನ್ನು 1904ನೆ ಇಸವಿ ಫೆಬ್ರವರಿ ಮಾಹೆ 1ರ ಲಾಗಾಯತು 1904ನೆ ಇಸವಿ ಜೂನ್ ಆಖೈರಿನವರಿಗೆ ಬೇಟೆ, ಷಿಕಾರಿ, ವಗೈರೆ ಕೆಲಸಗಳು ಮಾಡದಂತೆ ಬಂದುಮಾಡಿ ಇರುತ್ತೆ. ಸದರ ಮನ್ನಾ ಜಂಗಲು ಮತ್ತು ಪ್ಲಾಂಟೇಷ್ನಗಳನ್ನು ಮೈಸೂರು ಸೀಮೆಯ ಕಲೆಕ್ಟರ್‌ವೇಟ್ಸರ್ ಸಾ|| ರವರಿಂದಲಾಗಲಿ ಅಥವಾ ಅಧಿಕಾರ ಹೊಂದಿದ ಇತರ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದಲಾಗಲಿ ಕ್ರಮವಾಗಿ ಅಧಿಕಾರ ಹೊಂದದ ಯಾವ ಮನುಷ್ಯನು ಪ್ರವೇಶಿಸಕ್ಕೂಡದು. ಆ ಕ್ರಮವಾಗಿ ಪ್ರವೇಶಮಾಡಿದವರನ್ನು 1900ನೆ ಇಸವಿ XIನೆ ಫಾರೆಸ್ಟು ರಗ್ಯುಲೇಷ್ನ 24ನೆ ಸೆಕ್ಷ್ನ ಪ್ರಕಾರ ಶಿಕ್ಷೆಗೆ ಗುರಿಪಡಿಸ ಲಾಗುವದು:—

2. ಸ್ಟೇಟ್ ಫಾರೆಸ್ಟಿನಲ್ಲಿ ಯಾವ ಹಕ್ಕನ್ನಾದರೂ ಚಲಾಯಿಸುವ ಅಥವಾ ಅಂಥಾ ಫಾರೆಸ್ಟಿನಲ್ಲಿ ಮರಮುಟ್ಟನ್ನು ಕಡದು ಸಾಗಿಸಲು ಅಥವಾ ದನ ಕರುವನ್ನು ಮೇಯಿಸಲು ಅಥವಾ ಅಲ್ಲಿಂದ ಯಾವದಾದರೂ ಫಾರೆಸ್ಟೂತ್ಪತ್ತಿಯನ್ನು ತೆಗೆದುಕೊಳ್ಳಲು ಅಪ್ಪ ಣೆ ಪಡೆದ ಪ್ರತಿ ಮನುಷ್ಯನು, ಆ ಸ್ಟೇಟ್ಟ್ ಫಾರೆಸ್ಟಿನಲ್ಲಿ ಯಾರಾದರೂ ಅವನ ಜತೆಯಲ್ಲಿರುವ ಪ್ರತಿ ಮನುಷ್ಯನು, ಮತ್ತು ಸರ್ಕಾರದ ನೌಕರರಿಲ್ಲದ ಅಂಥಾ ಫಾರೆಸ್ಟಿಗೆ ಹತ್ತಿರದ ಯಾವದಾದರೂ ಗ್ರಾಮದಲ್ಲಿರುವ ಪ್ರತಿ ಮನುಷ್ಯನು ಅಥವಾ ಆ ಗ್ರಾಮದ ಪ್ರತಿ ನೌಕರನೂ ಅನವಶ್ಯಕವಾದ ಸಾವಕಾಶವಿಲ್ಲದೆ ಅಂಥಾ ಫಾರೆಸ್ಟಿನಲ್ಲಿ ಅಥವಾ ಅದರ ಸಮೀಪದಲ್ಲಿ ಹೊಂಚಿಬಿದ್ದು ವಿಚಾರವಾಗಿಯಾಗಲೀ ಯಾವದಾದರೂ ಫಾರೆಸ್ಟು ತಕ್ಸೀರ್ ನಡದ ಅಥವಾ ನಡಿಸಬೇಕೆಂಬ ಉದ್ದೇಶ್ಯದ ವಿಚಾರವಾಗಿಯೊಗಲೀ ತನಗೆ ದೊರಕಿರಬಹುದಾದ ಯಾವ ವರ್ತಮಾನವನ್ನಾದರೂ ಅತ್ಯಂತ ಸಮೀಪದಲ್ಲಿರುವ ಫಾರೆಸ್ಟಾಫಿಸರಿಗೆ ಅಥವಾ ಪೊಲೀಸಾಫಿಸರಿಗೆ ಕೊಡಲು ಬದ್ಧನಾಗಿರ ತಕ್ಕದ್ದಲ್ಲದೆ ತನ್ನ ಸಹಾಯವನ್ನು ತಗಾದೆಮಾಡುವ ಯಾವ ಫಾರೆಸ್ಟು ಅಥವಾ ಪೊಲೀಸಾಫಿಸರಿಗಾಗಲೀ

(a) ಅಂತಾ ಫಾರೆಸ್ಟಿನಲ್ಲಿ ಸಂಭವಿಸುವ ಯಾವ ಬೆಂಕಿಯನ್ನಾದರೂ ಆರಿಸೋಣದರಲ್ಲಿ

(b) ಅಂತಾ ಫಾರೆಸ್ಟಿನ ಆಸ್ಪಾಸಿನಲ್ಲಿ ಸಂಭವಿಸಬಹುದಾದ ಯಾವ ಬೆಂಕಿಯಾಗಲೀ ಅಂತಾ ಫಾರೆಸ್ಟಿನೊಳಕ್ಕೆ ವಿಸ್ತರಿಸ ದಂತೆ ತಪ್ಪಿಸೋಣದರಲ್ಲಿ

(c) ಅಂತಾ ಫಾರೆಸ್ಟಿನಲ್ಲಿ ಯಾವ ಫಾರೆಸ್ಟು ತಕ್ಸೀರು ನಡಿಯದಂತೆ ಅಡ್ಡಿ ಮಾಡೋಣದರಲ್ಲಿ, ಮತ್ತು

(d) ಅಂತಾದ್ದು ಯಾವದಾದರೂ ತಕ್ಸೀರ್ ಅಂತಾ ಫಾರೆಸ್ಟಿನಲ್ಲಿ ನಡದಿರುತ್ತೆಂದು ನಂಬಲು ಕಾರಣವಿರುವಾಗ, ಅದರಾ ಧಿಯನ್ನು ಕಂಡುಹಿಡಿದು ಅವನನ್ನು ದಸ್ತಗಿರಿ ಮಾಡೋಣದರಲ್ಲಿ ಸಹ ಕುಮ್ಮಕ್ಕಾಡತಕ್ಕದ್ದು. (1900ನೆ ಇಸವಿ 11ನೆ ಫಾರೆಸ್ಟು ರಗ್ಯುಲೇಷ್ನ 29ನೆ ಸೆಕ್ಷ್ನ.)

1. ಜೋಳ್ಗೇಮಟ್ಟು ಮನ್ನಾ ಜಂಗಲಿ ಬಡಾವಣೆ ಸಹ	...	ಚಿತ್ರದುರ್ಗ, ಹಿರಿಯೂರು ಮತ್ತು ಹೊಳಲ್ಕೆರೆ ತಾಲ್ಲೂಕುಗಳು.
2. ನೀರ್ಥಡಿ ಮನ್ನಾ ಜಂಗಲಿ ಬಡಾವಣೆ ಸಹ	...	ಚಿತ್ರದುರ್ಗ, ಹೊಳಲ್ಕೆರೆ, ದಾವಣಗೆರೆ ತಾಲ್ಲೂಕುಗಳು.
3. ನೀಲಗುಂದಿ ಪ್ಲಾಂಟೇಷ್ನ	....	ಚಿತ್ರದುರ್ಗದ ತಾಲ್ಲೂಕು.
4. ಪಿಳ್ಳೇಕೇರನಹಳ್ಳಿ ಡಿಟೋ	...	ಡಿಟೋ
5. ಚಳ್ಳಕೆರೆ ಡಿಟೋ	..	ಚಳ್ಳಕೆರೆ ಡಿಟೋ
6. ಮೊಳಕಾಲ್ಮುರು ಡಿಟೋ	....	ಮೊಳಕಾಲ್ಮುರು ತಾಲ್ಲೂಕು.
7. ಕಮರಾಕಾವಲ್ ರಿಜರ್ವಡ್ ಫಾರೆಸ್ಟು	...	ಡಿಟೋ
8. ಹಿರೇ ಅಡವಿ ಡಿಟೋ	..	ಡಿಟೋ
9. ಸಂಜೀವರಾಯನಕೋಟೆ ಮನ್ನಾ ಜಂಗಲಿ	...	ಡಿಟೋ
10. ಬಾಂಡರಾವಿ ರಿಜರ್ವಡ್ ಫಾರೆಸ್ಟು	...	ಡಿಟೋ
11. ಕೃಷ್ಣರಾಜಪುರ ಡಿಟೋ	..	ಡಿಟೋ
12. ಜಗಳೂರು ಪ್ಲಾಂಟೇಷ್ನ	...	ಜಗಳೂರು ತಾಲ್ಲೂಕು.
13. ರಂಗಯ್ಯನದುರ್ಗ ರಿಜರ್ವಡ್ ಫಾರೆಸ್ಟು	...	ಡಿಟೋ
14. ಅಣಬೂರು ಡಿಟೋ	...	ಡಿಟೋ
15. ಮಲೇಬೆನ್ನೂರು ಮನ್ನಾ ಜಂಗಲಿ	...	ಹರಿಹರದ ಸಬ್ ತಾಲ್ಲೂಕು ಮತ್ತು ಹೊನ್ನಾಳಿ ತಾಲ್ಲೂಕು.
16. ದೇವರಗುಡ್ಡ ಡಿಟೋ	..	ಹೊಳಲ್ಕೆರೆ ಮತ್ತು ಹೊಸದುರ್ಗದ ತಾಲ್ಲೂಕು.
17. ಗರ್ಡಾಕಾವಲ್ ಡಿಟೋ	....	ಹೊಳಲ್ಕೆರೆ ತಾಲ್ಲೂಕು.
18. ಜಾನಕಲ್ ರಿಜರ್ವಡ್ ಫಾರೆಸ್ಟು	...	ಹೊಳಲ್ಕೆರೆ ಮತ್ತು ಹೊಸದುರ್ಗದ ತಾಲ್ಲೂಕು.
19. ಕುದುರೇಕಣಿವೆ ಮನ್ನಾ ಜಂಗಲಿ		ಹೊಸದುರ್ಗ.
20. ಲಕ್ಕೀಹಳ್ಳಿ ರಿಜರ್ವಡ್ ಫಾರೆಸ್ಟು	....	ಹೊಳಲ್ಕೆರೆ, ಹೊಸದುರ್ಗ, ಹಿರಿಯೂರು.
21. ಮಾರೀಕಣಿವೆ ಡಿಟೋ	....	ಹೊಸದುರ್ಗ, ಹಿರಿಯೂರು.

ಕೆ. ಶಾಮೈಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟು.